# ನಿಜವಾದ ವಿದ್ಯೆ ಯಾವುದು?



ಅದೊಂದು ಸರ್ಕಾರಿ ಮಾಧ್ಯಮಿಕ ಶಾಲೆ. ಅಂದು ಆ ಶಾಲೆಯಲ್ಲಿ ಎಲ್ಲಿಲ್ಲದ ಸಂಭ್ರಮ. ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದವರಿಗೆ ಬಹುಮಾನ ಕೊಟ್ಟು ಸನ್ಮಾನಿಸುವ ಸಮಾರಂಭವನ್ನು ಆಯೋಜಿಸಲಾಗಿತ್ತು. ವಿದ್ಯಾರ್ಥಿಗಳೂ, ಅವರ ಪೋಷಕರೂ ಮತ್ತು ಶಾಲೆಯ ಸಿಬ್ಬಂದಿ ವರ್ಗದವರೂ ಬೆಂಚುಗಳ ಮೇಲೆ ಸಾಲಾಗಿ ಶಿಸ್ತಿನಿಂದ ಕುಳಿತುಕೊಂಡಿದ್ದರು. ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಯನ್ನು ವೇದಿಕೆಯ ಮುಂದಿದ್ದ ಕುರ್ಚಿಯಲ್ಲಿ ಕೂಡ್ರಿಸಿದ್ದರು.

ಒಬ್ಬ ಸುಂದರವಾದ ಬಾಲಕ ತನ್ನ ವರ್ಗದ ಸಾಲಿನಲ್ಲಿ ಸಪ್ಪೆ ಮೋರೆಯನ್ನು ಹಾಕಿಕೊಂಡು ಕುಳಿತಿದ್ದ. ಆತನಿಗೆ ಅಸಂತೋಷ, ಸಮಾರಂಭದಲ್ಲಿ ಭಾಗವಹಿಸಲು ಇಷ್ಟವಿರಲಿಲ್ಲ. ಆತ ಯಾವಾಗಲೂ ತನ್ನ ತರಗತಿಯಲ್ಲಿ ಹೆಚ್ಚಿನ ಅಂಕಗಳನ್ನು ಗಳಿಸುವ ವಿದ್ಯಾರ್ಥಿಯಾಗಿದ್ದ. ಆದರೆ ಈಗ ನಡೆದ ಪರೀಕ್ಷೆಯ ಸಮಯದಲ್ಲಿ ಆರೋಗ್ಯದಲ್ಲಿ  ಏರುಪೇರಾಗಿದ್ದರಿಂದ ಅವನಿಗೆ ಹೆಚ್ಚು ಅಂಕ ಗಳಿಸಲು ಸಾಧ್ಯವಾಗಿರಲಿಲ್ಲ.

ಆ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಬಂದಿದ್ದವರು ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಯನ್ನು ಬಹುಮಾನ ಕೊಡಲು ವೇದಿಕೆಗೆ ಕರೆದರು. ಅವನಿಗೆ ಬಹುಮಾನವನ್ನು ನೀಡಿದ ನಂತರ ಆ ಮುಖ್ಯ ಅತಿಥಿಗಳು ನೋಡೋಣ ಇವನ ಸಾಮಾನ್ಯ ಜ್ಞಾನ ಹೇಗಿದೆ ಎಂಬುದನ್ನು ಅರಿಯುವ ಸಲುವಾಗಿ ನಾಲ್ಕಾರು ಪಠ್ಯೇತರ ವಿಷಯಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳಿದರು. ಒಂದಕ್ಕೂ ಉತ್ತರ ಕೊಡದ ಆ ವಿದ್ಯಾರ್ಥಿ ಸಪ್ಪೆ ಮೋರೆ ಮಾಡಿಕೊಂಡು ತಲೆತಗ್ಗಿಸಿ ನಿಂತುಕೊಂಡ. ಆಗ ಬೆಂಚಿನ ಮೇಲೆ ಕುಳಿತುಕೊಂಡಿದ್ದ ಆ ಸುಂದರ ಬಾಲಕ ಮೇಲೆದ್ದು 'ಸರ್! ಆ ಎಲ್ಲಾ ಪ್ರಶ್ನೆಗಳಿಗೂ ನನಗೆ ಉತ್ತರ ಗೊತ್ತು.  ನಾನೂ ಅವನ ತರಗತಿಯವನೇ! ತಾವು ಅನುಮತಿ ನೀಡಿದರೆ ನಾನು ಉತ್ತರಿಸುತ್ತೇನೆ' ಎಂದು ನುಡಿದ. ಅತಿಥಿಗಳು 'ಆಗಲಿ!' ಎಂದು ಸಮ್ಮತಿಸಿದರು.

ಆ ಸುಂದರ ಬಾಲಕ ಆ ಎಲ್ಲಾ ಪ್ರಶ್ನೆಗಳಿಗೂ ಪಟಪಟನೆ ಉತ್ತರ ನೀಡಿದ. ಆ ಉತ್ತರಗಳೆಲ್ಲಾ ಸರಿಯಾಗಿದ್ದವು. ಮುಖ್ಯ ಅತಿಥಿಗಳೂ, ಸಭಿಕರೂ ಮತ್ತು ಅಧ್ಯಾಪಕ ವರ್ಗದವರೂ ಸಂತೋಷಗೊಂಡರು ಮತ್ತು ಆಶ್ಚರ್ಯಚಕಿತರಾದರು.

ಅತಿಥಿಗಳು ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಯ ಹೆಗಲು ತಟ್ಟಿ, 'ಏನು ಮರಿ! ನಾನು ಕೇಳಿದ ಒಂದು ಪ್ರಶ್ನೆಗೂ ಉತ್ತರ ಕೊಡಲಿಲ್ಲ. ಪರೀಕ್ಷೆಯಲ್ಲಿ ಹೇಗೆ ಬರೆದೆ? ಅತಿ ಹೆಚ್ಚು ಅಂಕಗಳನ್ನು ಹೇಗೆ ಪಡೆದೆ?' ಎಂದು ಕೇಳಿದರು. ಆ ಹುಡುಗ ದುಃಖದಿಂದ ಹೇಳಿದ, 'ಸರ್! ನನಗೆ ಪಾಠಗಳನ್ನು ಕಂಠಪಾಠ ಮಾಡಿ ಪರೀಕ್ಷೆಯಲ್ಲಿ ಬರೆಯುವುದು ಮಾತ್ರ ಗೊತ್ತು. ಅದನ್ನು ಬಿಟ್ಟು ಬೇರೆ ವಿಷಯಗಳ್ಯಾವುವೂ ನನಗೆ ಗೊತ್ತಿಲ್ಲ! ಅತ್ತ ನಾನು ಗಮನಹರಿಸುವುದೂ ಇಲ್ಲ!'

ಒಬ್ಬ ಹುಡುಗ ಕೇವಲ ಗಿಳಿಪಾಠ ಮಾಡಿ ಮೊದಲನೇ ಬಹುಮಾನ ಪಡೆದಿದ್ದ! ಇನ್ನೊಬ್ಬ ಕೇವಲ ಪಠ್ಯಗಳಿಗೇ ತನ್ನ ಓದನ್ನು ಸೀಮಿತಗೊಳಿಸದೆ, ತನ್ನ ಸ್ವಂತ ಬುದ್ಧಿಯಿಂದ ಬೇರೆ ಬೇರೆ ವಿಷಯಗಳ ಜ್ಞಾನವನ್ನು ಸಂಪಾದಿಸಿ ಮುಖ್ಯ ಅತಿಥಿಗಳ ಪ್ರಶ್ನೆಗಳಿಗೆಲ್ಲಾ ಸಮಂಜಸ ಉತ್ತರ ಕೊಟ್ಟು ಎಲ್ಲರ ಮೆಚ್ಚುಗೆಗೆ ಪಾತ್ರನಾಗಿದ್ದ! ಇದರಿಂದ ನಿಜವಾದ ವಿದ್ಯೆ ಯಾರದೆಂಬುದು ಸ್ಪಷ್ಟವಾಗಿತ್ತು!

ಅಷ್ಟರಲ್ಲಿ ವೇದಿಕೆಯ ಮೇಲೆ ಕುಳಿತಿದ್ದ ಆಂಗ್ಲ ಮಹನೀಯರೊಬ್ಬರು ಕೆಳಗಿಳಿದು ಬಂದು, 'ಈ ಹುಡುಗನಿಗೆ ನಾನು ನೀಡುತ್ತಿರುವ ವೈಯಕ್ತಿಕ ಬಹುಮಾನ ಇದು' ಎಂದು ಬೆಲೆ ಬಾಳುವ ಪಾರ್ಕರ್ ಪೆನ್ನನ್ನು ನೀಡಿದರು. ಶ್ರೀಮತಿ ಪೊಸ್ಬಾನ್ ಎಂಬ ಪ್ರತಿಷ್ಠಿತ ಆಂಗ್ಲ ಮಹಿಳೆಯೊಬ್ಬರು ತಮ್ಮ ಪರ್ಸಿನಿಂದ ಐವತ್ತು ರೂಪಾಯಿಗಳನ್ನು ತೆಗೆದುಕೊಟ್ಟು, ಅವನ ತಲೆಯನ್ನು ಪ್ರೀತಿಯಿಂದ ನೇವರಿಸಿ, 'ನಿನ್ನ ಹೆಸರೇನಪ್ಪಾ, ಮಗೂ?' ಎಂದು ಕೇಳಿದರು. ಅವನು ವಿನಯದಿಂದ, 'ನನ್ನ ಹೆಸರು ದಾದಾಭಾಯಿ ನವರೋಜಿ!' ಎಂದು ಉತ್ತರಿಸಿದ. ಸಭಿಕರೆಲ್ಲಾ ಹರ್ಷದಿಂದ ಜೋರಾಗಿ ಕರತಾಡನ ಮಾಡಿದರು.

ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸ್ಥಾಪಕರಲ್ಲಿ ಒಬ್ಬರಾದ ನವರೋಜಿ ಖ್ಯಾತ ವಿದ್ವಾಂಸ ಹಾಗೂ ಶಿಕ್ಷಣ ತಜ್ಞರಾಗಿದ್ದರು.

**-ಬಿ.ಪಾಂಡುರಂಗಯ್ಯ, ದಾವಣಗೆರೆ**